

# ಶಾರೂಕ್ ವಿನಯ

'ಚೆನ್ನೈ ಎಕ್ಸ್‌ಪ್ರೆಸ್' ಬಾಕ್ಸ್ ಆಫೀಸ್ ಲೂಟಿ ಹೊಡೆಯುತ್ತಿದ್ದರೂ, ಚಿತ್ರದ ಕುರಿತು ವ್ಯಕ್ತವಾಗುತ್ತಿರುವ ಟೀಕೆಗಳಿಗೇನೂ ಕಡಿಮೆಯಿಲ್ಲ. ಅದರಲ್ಲೂ ಶಾರೂಕ್ ಖಾನ್‌ನಂತಹ ಅನುಭವಿ, ಜನಪ್ರಿಯ ನಟ ಇಂತಹ ಸಿನಿಮಾಗಳಲ್ಲಿ ನಟಿಸುವುದು ಸರಿಯಲ್ಲ ಎಂಬ ಮಾತುಗಳೂ ಕೇಳಿಬರುತ್ತಿವೆ. ಈ ಎಲ್ಲಾ ಹೊಗಳಿಕೆ–ತೆಗಳಿಕೆಗಳನ್ನು ಶಾರೂಕ್ ಸಮ ಚಿತ್ತದಿಂದ ಸ್ವೀಕರಿಸುತ್ತಿದ್ದಾನಂತೆ.

'ನಾನು ಹಂಚಿಕೊಳ್ಳುವುದನ್ನು ಬಯಸುತ್ತೇನೆ. ಜನರನ್ನು ಖುಷಿಪಡಿಸುವುದು ನನ್ನ ಕಾಯಕ. ನಿರ್ದೇಶಕರನ್ನು ಎಂದಿಗೂ ನಾನು ಪ್ರಶ್ನಿಸುವುದಿಲ್ಲ. ನನ್ನ ಕೆಲಸವನ್ನು ಮಾಡುತ್ತೇನೆ' ಎಂದಿದ್ದಾರೆ ಶಾರೂಕ್. ಎರಡು ದಶಕದಲ್ಲಿ ಸುಮಾರು 60ಕ್ಕೂ ಹೆಚ್ಚು ಸಿನಿಮಾಗಳಿಗೆ ಬಣ್ಣ ಹಚ್ಚಿರುವ ಶಾರೂಕ್, 'ಯಶಸ್ಸಿನ ತುದಿಯನ್ನೇರಿದ ಬಳಿಕ ಸಾಗಿ ಬಂದ ಹಾದಿಯನ್ನು ಅನೇಕರು ಮರೆಯುತ್ತಾರೆ. ನಿಮ್ಮ ಯಶಸ್ಸಿನ ಶ್ರೇಯಸ್ಸನ್ನು ನೀವು ತೆಗೆದುಕೊಳ್ಳಲು ಸಾಧ್ಯವೇ ಇಲ್ಲ. ಅದೇ ಪ್ರಮಾಣದ ಗೆಲುವನ್ನು ಮಕ್ಕಳು ಅಥವಾ ಸ್ನೇಹಿತರಿಗೂ ಸಿಗುವಂತೆ ಮಾಡುವುದೂ ಅಸಾಧ್ಯ. ಏಕೆಂದರೆ ಆ ಸ್ಥಾನವನ್ನು ನೀವು ಹೇಗೆ ತಲುಪಿದ್ದೀರಿ ಎನ್ನುವುದು ನಿಮಗೇ ತಿಳಿದಿರುವುದಿಲ್ಲ. ಮನಸ್ಸಿನೊಳಗೆ ವಿಶ್ಲೇಷಣೆ ಮತ್ತು ಲೆಕ್ಕಾಚಾರ ನಡೆಸದೆ ಒಪ್ಪಿಸಿದ ಕೆಲಸವನ್ನು ಒಪ್ಪವಾಗಿ ಮಾಡುವುದನ್ನಷ್ಟೇ ನಂಬುತ್ತೇನೆ' ಎಂದು ವೇದಾಂತಿಯಂತೆ ಮಾತನಾಡಿದ್ದಾರೆ. 'ಚೆನ್ನೈ ಎಕ್ಸ್‌ಪ್ರೆಸ್' ವೇಗದ ಗಳಿಕೆ ಸ್ವತಃ ಶಾರೂಕ್‌ರನ್ನೂ ಅಚ್ಚರಿಗೊಳಿಸಿದೆಯಂತೆ. ಈ ಹೊತ್ತಲ್ಲಿ ಶಾರೂಕ್‌ರ ತತ್ವಜ್ಞಾನದ ನುಡಿಗಳು ಅವರ ವಿಧೇಯತೆಯ ದ್ಯೋತಕ ಎನ್ನಲಾಗುತ್ತಿದೆ.



# ಮಂದಿರಾ ಅಳಲು

ಸಿನಿಮಾ, ಕಿರುತೆರೆ, ಕ್ರಿಕೆಟ್, ಹೀಗೆ ಮೂರು ಕ್ಷೇತ್ರದಲ್ಲಿ ಸದಾ ಬಿಜಿಯಾಗಿರುವ ನಟಿಯೆಂದರೆ ಮಂದಿರಾ ಬೇಡಿ. ಸಿನಿಮಾದಲ್ಲಿ ಕಾಣದ ಜನಪ್ರಿಯತೆಯನ್ನು ಅವರಿಗೆ ಕ್ರಿಕೆಟ್ ವೀಕ್ಷಕ ವಿವರಣೆ ತಂದುಕೊಟ್ಟಿತು. ಆದರೆ ಆ ಹೆಸರು ಮಂದಿರಾಗೆ ಖುಷಿ ಕೊಟ್ಟಿಲ್ಲ. ಬದಲಾಗಿ ತಾವೊಬ್ಬ ನಟಿಯೆಂದು ನೋಡುವುದನ್ನೇ ಜನ ನಿಲ್ಲಿಸಿದ್ದಾರೆ ಎಂಬ ದುಃಖ ಅವರದು.

'ನಾನು ಯಾವಾಗಲೂ ಕ್ರಿಕೆಟ್ ಅಥವಾ ರಿಯಾಲಿಟಿ ಷೋ ನಿರೂಪಣೆ ಮಾಡುವ ಮೂಲಕ ಕಿರುತೆರೆಯಲ್ಲಿ ಕಾಣಿಸಿಕೊಳ್ಳುತ್ತಿರುತ್ತೇನೆ. ಹೀಗಾಗಿ ಜನ ನನ್ನನ್ನು ನಿರೂಪಕಿ ಎಂದು ಭಾವಿಸಿದ್ದಾರೆಯೇ ಹೊರತು ನಟಿಯೆಂದು ನೋಡುತ್ತಿಲ್ಲ' ಎಂಬ ಕೊರಗು ಅವರದು. 'ಶಾಂತಿ' ಮತ್ತು 'ಕ್ಯೋಂಕಿ ಸಾಸ್ ಭೀ ಕಭಿ ಬಹೂ ಥಿ' ಧಾರಾವಾಹಿಗಳ ಮೂಲಕ ಕಿರುತೆರೆ ನಟಿಯಾಗಿಯೂ ಗುರುತಿಸಿಕೊಂಡಿದ್ದ ಮಂದಿರಾ, ಒಂಬತ್ತು ವರ್ಷದ ಬಳಿಕ ಮತ್ತೆ ಅಮೆರಿಕದ ಜನಪ್ರಿಯ ಸರಣಿ '24'ರ ಭಾರತೀಯ ಅವತರಣಿಕೆಯಲ್ಲಿ ನಟಿಸುವ ಮೂಲಕ ಕಿರುತೆರೆಯ ನಟನಾ ಪ್ರಪಂಚಕ್ಕೆ ಮರಳಿದ್ದಾರೆ.

'ಅಭಿನಯ ಬಿಟ್ಟು ಯಾವಾಗಲೂ ಕ್ರಿಕೆಟ್ ಸ್ಟೇಡಿಯಂನಲ್ಲೇ ಕಾಲ ಕಳೆಯುತ್ತಿದ್ದರೆ ಜನ ಹೇಗೆ ತಾನೆ ನಟಿಯೆಂದು ಗುರುತಿಸಲು ಸಾಧ್ಯ' ಎನ್ನುವುದು ಈಕೆಯ ಬಗ್ಗೆ ಕುಹಕಿಗಳ ಮಾತು.

■ ಅಮಿ

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65